O.S. 5439/2012

DW1

ದಿನಾಂಕಃ **18.07.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಕೆ.ಜಿ.ಎಸ್ ರವರಿಂದಃ

ನಿಡಿ-**2** ಹಕ್ಕು ಬಿಡುಗಡೆ ಪತ್ರದ ಬಗ್ಗೆ ನನಗೆ ಗೊತ್ತು. ನಿಡಿ-**2** ಹಕ್ಕು ಬಿಡುಗಡೆ ಪತ್ರವನ್ನು ಎಲ್ಲಾ ಅಣ್ಣ ತಮ್ಮಂದಿರುವ ಮತ್ತು ಅಕ್ಕ ತಂಗಿಯರಿಗೆ ನನ್ನ ತಂದೆ ರಾಜೇಂದ್ರ ರವರ ಹೆಸರಿಗೆ ಮಾಡಿ ಕೊಟ್ಟಿರುತ್ತಾರೆ. ನಿಡಿ-**2** ಹಕ್ಕು ಬಿಡುಗಡೆ ಪತ್ರದಲ್ಲಿ ಯಾವುದೇ ರೀತಿಯಾದ ಹಣವನ್ನು ನನ್ನ ತಂದೆಯು ಹಕ್ಕು ಬಿಡುಗಡೆದಾರರಿಗೆ ಪಾವತಿಸಿರುವುದಿಲ್ಲ. ದಾವಾ ಸ್ವತ್ತು ನನ್ನ ತಾತ ಜಯರಾಮ ಶೆಟ್ಟಿ ರವರಿಗೆ ಸೇರಿದ ಸ್ವತ್ತು ಆಗಿರುತ್ತದೆ. ದಾವಾ ಸ್ವತ್ತನ್ನು ಖರೀದಿಸಲು ನನ್ನ ತಂದೆ ಯಾವುದೇ ಹಣವನ್ನು ಹೂಡಿಕೆ ಮಾಡಿರುವುದಿಲ್ಲ. ಹಕ್ಕು ಬಿಡುಗಡೆದಾರರು ನಿಡಿ-**2** ಪತ್ರವನ್ನು ನನ್ನ ತಂದೆಯ ಮೇಲಿನ ಗೌರವ ಪೂರ್ವಕವಾಗಿ ಬರೆದುಕೊಟ್ಟಿರುತ್ತಾರೆ. ಹಕ್ಕು ಬಿಡುಗಡೆದಾರು ನಿಡಿ-**2** ಹಕ್ಕು ಬಿಡುಗಡೆ ಪತ್ರವನ್ನು ನನ್ನ ತಂದೆಯ ಮೇಲಿನ ಗೌರವ ಪೂರ್ವರಕ ಕಾರಣಕ್ಕೆ ಬರೆದುಕೊಟ್ಟಿರುತ್ತಾರೆ ಎನ್ನುವ ಯಾವುದೇ ಉಲ್ಲೇಖ ಇರುವುದಿಲ್ಲ. ನಿಡಿ-**2** ಹಕ್ಕು ಬಿಡುಗಡೆ ಪತ್ರ ನೊಂದಾವಣೆ ಮಾಡುವ ಕಾಲಕ್ಕೆ ನನ್ನ ತಂದೆ ಮತ್ತು ವಾದಿ ಅಶೋಕ್ ರವರು ಹಾಗೂ ಎಲ್ಲಾ ಅಕ್ಕ ತಂಗಿಯರು ಮತ್ತು ಅಣ್ಣ ತಮ್ಮಂದಿರು ಸಂಬಂಧದಲ್ಲಿ ಚೆನ್ನಾಗಿದ್ದರು ಮತ್ತು ಯಾವುದೇ ವೈಮನಸು ಇರಲಿಲ್ಲ. ನಿಡಿ-**2** ಹಕ್ಕು ಬಿಡುಗಡೆ ಪತ್ರ ಮಾಡುವ ಕಾಲಕ್ಕೆ ದಾವಾ ಸ್ವತ್ತು ಯಾವ ಸ್ಥಿತಿಯಲ್ಲಿ

ಇತ್ತು ಎಂದರೆ ಸಾಕ್ಷಿಯು ಹಳೆ ಮನೆ ಸ್ವತ್ತು ಆಗಿತ್ತು ಎಂದು ನುಡಿಯುತ್ತಾರೆ. ನಿಡಿ-**2** ಹಕ್ಕು ಬಿಡುಗಡೆ ಪತ್ರ ನೊಂದಾವಣೆ ನಂತರ ದಾವಾ ಸ್ವತ್ತಿನಲ್ಲಿ ಇದ್ದ ಹಳೆ ಮನೆಯನುನ ಕೆಡವಿ ಹೊಸ ಕಟ್ಟಡ ಕಟ್ಟಿಸಬೇಕು ಎಂದು ನಮ್ಮ ಕುಟುಂಬದ ಎಲ್ಲಾ ಸದಸ್ಯರು ಮನಸ್ಸು ಮಾಡಿದ್ದರು ಎಂದರೆ ಸಾಕ್ಷಿಯು ನಾನು ಮನಸ್ಸು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ಆಗಲಿ ಅಥವಾ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಹೊಸ ಮನೆ ಕಟ್ಟಿಸಬೇಕು , ಕಟ್ಟಿಸಿದ ನಂತರ ನಾನು ಮತ್ತು ವಾದಿಗಳು ಜೊತೆಗೆ ವಾಸ ಮಾಡಬೇಕು ಎಂದು ಮಾತುಕತೆ ಮಾಡಿದ್ದೇವು ಎಂದರೆ ಸರಿಯಲ್ಲ. ಸದರಿ ಮಾತುಕತೆಯಂತೆ ನನ್ನ ಚಿಕ್ಕಪ್ಪ ವಾದಿಗೆ ಕಟ್ಟಡದಲ್ಲಿನ **2** ಮತ್ತು **3**ನೇ ಮಹಡಿ ಮನೆಯನ್ನು ಕೊಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮಾತುಕತೆಯಂತೆ **2** ಮತ್ತು **3**ನೇ ಮನೆಗಳ ಮೇಲೆ ವಾದಿ ಮತ್ತು ನಾನು ಹಾಗೂ ನನ್ನ ಕುಟುಂಬದ ಸದಸ್ಯರು ಕ್ರಯ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸಾಕ್ಷಿಯು **2**ನೇ ಮನೆಗೆ ಮಾತ್ರ ಬರೆದುಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. **3**ನೇ ಮಹಡಿ ಮನೆಗೂ ಸಹ ನಾನು ಕ್ರಯ ಪತ್ರ ಬರೆದುಕೊಡುವ ಬಾಧ್ಯತೆ ಇದ್ದ ಕಾರಣ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಯಾರು ಯಾರು ಎಷ್ಟು ಹಣವನ್ನು ಹೂಡಿಕೆ ಮಾಡಿರುತ್ತಾರೆ ಎಂದರೆ

ಸಾಕ್ಷಿಯು ಎಲ್ಲಾ ಹಣವನ್ನು ನಾನು ಹೂಡಿಕೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಮ್ಮ ಮಾತ್ರ ದಾವಾ ಸ್ವತ್ತಿನಲ್ಲಿನ ಕಟ್ಟಡ ಕಟ್ಟಲು ಹಣ ಹೂಡಿಕೆ ಮಾಡಿರುತ್ತೇವೆ ಎಂದು ತೋರಿಸಲು ಸಂಬಂಧಿತ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿನ ಕಟ್ಟಡವನ್ನು ಕಟ್ಟಲು ನಾನು ಮತ್ತು ನನ್ನ ತಮ್ಮ ರೂ.**25** ಲಕ್ಷ ಹಣವನ್ನು ಹೂಡಿಕೆ ಮಾಡಿರುತ್ತೇವೆ. ದಾವಾ ಸ್ವತ್ತಿನಲ್ಲಿ **4** ನೇ ಮಹಡಿಯಲ್ಲಿ ಕಟ್ಟಡ ನನಗೆ ಸೇರಿದ ಕಟ್ಟಡ ಆಗಿರುತ್ತದೆ. ನಿಡಿ-**3** ಕ್ರಯ ಪತ್ರದ ಎಲ್ಲಾ ವಕ್ಕಣಿಕೆಯನ್ನು ಓದಿಕೊಂಡಿರುತ್ತೇನೆ. ನಿಡಿ-**3** ಕ್ರಯ ಪತ್ರದಲ್ಲಿ **6** ನೇ ಸಂಪುಟ ಕಂಡಿಕೆ-**2** ರಲ್ಲಿನ ವಿಷಯ ಸರಿ ಇರುವುದಿಲ್ಲ. ಸದರಿ ವಿಷಯವನ್ನು ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಿಡಿ-**6** ದಾಖಲೆಯ ರೀತಿಯ ಮೂದ ದಾವಾ ಸಂ.**2705/2013** ಪ್ರಕರಣದಲ್ಲಿ ಪ್ರಶ್ನಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಿಡಿ-**3** ಕ್ರಯ ಪತ್ರದಲ್ಲಿ **6** ನೇ ಸಂಪುಟ ಕಂಡಿಕೆ-**2** ರಲ್ಲಿನ ವಿಷಯ ಸರಿ ಇರುವುದಿಲ್ಲ ಎನ್ನುವ ವಿಷಯವನ್ನು ನಾನು ನನ್ನ ಚಿಕ್ಕಪ್ಪ ವಾದಿಯೊಂದಿಗೆ ಮಾತನಾಡಿಸಿರುತ್ತೇನೆ. ವಾದಿಯು ದಾವಾ ಸ್ವತ್ತಿನ **2** ನೇ ಮಹಡಿಯಲ್ಲಿ ಪ್ರಸ್ತುತವಾಗಿ ಸ್ವಾಧೀನ ಅನುಭವದಲ್ಲಿ ಇದ್ದಾರೆ. ದಾವಾ ಸ್ವತ್ತಿನ **4** ನೇ ಮಹಡಿಯಲ್ಲಿನ ಕಟ್ಟಡದಲ್ಲಿಯು ಪ್ರಸ್ತುತವಾಗಿ ವಾದಿಯೇ ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು

ಅದನ್ನು  ವಾದಿಯು ನನಗೆ ಇನ್ನು ಬಿಟ್ಟುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಕಟ್ಟಡವನ್ನು ಕಟ್ಟಿಸಲು ವಾದಿ ಅಶೋಕ್ ರವರು ಸಹ  ಹಣವನ್ನು ನನ್ನೊಂದಿಗೆ ಹಣವನ್ನು ಹೂಡಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿ ನಿಡಿ-**3** ರೀತಿಯ  ಕ್ರಯ ಪತ್ರವನ್ನು ನಾನು ನನ್ನ ಚಿಕ್ಕಪ್ಪನ  ಮೇಲಿನ ಗೌರವದಿಂದ ವಾದಿ ನನ್ನ ಚಿಕ್ಕಪ್ಪನ  ಹೆಸರಿಗೆ  ಬರೆದುಕೊಟ್ಟಿರುತ್ತೇನೆ. ನಿಡಿ-**3** ಕ್ರಯ ಪತ್ರವನ್ನು ವಾದಿ  ನನ್ನ ಚಿಕ್ಕಪ್ಪನ ಹೆಸರಿಗೆ ಅವರ ಮೇಲಿನ ಗೌರವಕ್ಕಾಗಿ ಬರೆದುಕೊಟ್ಟಿರುತ್ತೇನೆ ಎಂದು ನಿಡಿ-**3** ಕ್ರಯ ಪತ್ರದಲ್ಲಿ ಉಲ್ಲೇಖ ಇರುವುದಿಲ್ಲ. ನಿಡಿ-**3** ಕ್ರಯ ಪತ್ರದಲ್ಲಿ ವಾದಿ ನನ್ನ ಚಿಕ್ಕಪ್ಪ ಹಣವನ್ನು ನನಗೆ ಕ್ರಯದ ಮೊಬಲಾಗಿ ಕೊಟ್ಟಿರುವ ವಿಷಯವು ನಿಡಿ-**3**  ಕ್ರಯ ಪತ್ರ ಬರೆದುಕೊಟ್ಟಿರುವ ಉಲ್ಲೆಖ  ಇರುತ್ತದೆ ಎಂದರೆ ಸಾಕ್ಷಿಯು ನನಗೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-**3** ಕ್ರಯ ಪತ್ರಕ್ಕೆ ನಾನು ನನ್ನ ತಾಯಿ ಮತ್ತು ನನ್ನ ತಮ್ಮ ಸಹಿ ಮಾಡಿರುತ್ತೇವೆ ಎಂದರೆ ಸರಿ. ನಿಡಿ-**3** ಕ್ರಯ ಪತ್ರ ವನ್ನು ಕ್ರಯದ ಮೊಬಲಾಗಿ ವಾದಿಯು ಹಣವನ್ನು ಪಾವತಿಸಿದ ಕಾರಣಕ್ಕಾಗಿ ನಾನು ನನ್ನ ತಾಯಿ ಮತ್ತು ನನ್ನ ತಮ್ಮ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-**2** ಹಕ್ಕು ಬಿಡುಗಡೆ ಪತ್ರ ಮಾಡಿಕೊಡುವ ಸಂದರ್ಭದಲ್ಲಿ ನನ್ನ ತಂದೆ ಮತ್ತು ವಾದಿ ಚಿಕ್ಕಪ್ಪನ ನಡುವೆ ದಾವಾ ಸ್ವತ್ತಿನಲ್ಲಿ ಕಟ್ಟಬಹುದಾದ ಕಟ್ಟಡದಲ್ಲಿ  ವಾದಿಗೂ ಸಹ ಕಟ್ಟಡವನ್ನು ಕೊಡಬೇಕು ಎನ್ನುವ  ಮೌಖಿಕ  ಮಾತುಕತೆ ಆಗಿತ್ತು

ಎಂದರೆ ಸರಿಯಲ್ಲ. ಈ ಬಗ್ಗೆ ನನ್ನ ತಂದೆ ಮತ್ತು ವಾದಿ ಅಶೋಕ್ ರವರ ನಡುವೆ ಒಂದು ಲಿಖಿತ ಒಡಂಬಡಿಕೆ ಆಗಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಕಟ್ಟ ಬಹುದಾದ ಕಟ್ಟಡವನ್ನು ವಾದಿ ನನ್ನ ಚಿಕ್ಕಪ್ಪನಿಗೆ ಕೊಡಬೇಕು ಎನ್ನುವ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ನಡುವೆ ಒಂದು ಲಿಖಿತ ಕರಾರು ಆಗಿತ್ತು ಸದರಿ ಲಿಖಿತ ಕರಾರಿಗೆ ನಾನು ಸಹ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಿಡಿ-**2** ಹಕ್ಕು ಬಿಡುಗಡೆ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಡಿ-**2** ಹಕ್ಕು ಬಿಡುಗಡೆ ಪತ್ರದ ಮೂಲ ಪ್ರತಿ ನನ್ನ ಸ್ವಾಧೀನದಲ್ಲಿ ಇರುತ್ತದೆ. ಸದರಿ ಮೂಲ ಪ್ರತಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಬ್ಯಾಂಕಿನವರು ನನಗೆ ಸದರಿ ದಾಖಲೆಯನ್ನು ನನಗೆ ಕೊಡುವುದಿಲ್ಲ ಎಂದು ಹೇಳುತ್ತಾರೆ. ಮೂಲ ಪ್ರತಿಯನ್ನು ಬ್ಯಾಂಕಿನಿಂದ ಪಡೆಯಲು ನಾನು ಯಾವುದೇ ಪ್ರಯತ್ನ ಮಾಡಿಲ್ಲ. ನಿಡಿ-**2** ಹಕ್ಕು ಬಿಡುಗಡೆ ಮೂಲ ಪ್ರತಿಯನ್ನು ನಾನು ಇಗಲೂ ಸಹ ತಂದು ಹಾಜರು ಪಡಿಸಲು ಸಾಧ್ಯವಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವ ರೀತಿಯಾದ ವಿಭಾಗ ಹಕ್ಕು ಇರುತ್ತದೆಯೋ ಅದೇ ರೀತಿಯಾದ ಹಕ್ಕು ವಾದಿಗೂ ಸಹ ಇರುತ್ತದೆ ಎಂದರೆ ಸರಿಯಲ್ಲ. ವಿಭಾಗ ಹಕ್ಕಿನ ಆಧಾರದಂತೆ ದಾವಾ ಸ್ವತ್ತಿನಲ್ಲಿ **2**ನೇ ಮಹಡಿಗೆ ನಾನು ನಿಪಿ-**3** ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ವಿಭಾಗ ಹಕ್ಕಿನಂತೆ ವಾದಿಗೆ ನಾನು **3**ನೇ ಮಹಡಿಯಲ್ಲಿ ಕಟ್ಟಡದ ಮೇಲಿನ ಕಟ್ಟಡ ಸಹ ಕ್ರಯ ಪತ್ರ

ಬಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರೀತಿಯಾದ ಕ್ರಯ ಪತ್ರವನ್ನು ನಾನು ವಾದಿಗೆ ಬರೆದುಕೊಡಲು ಯಾವುದೇ ಬಾಧ್ಯತೆ ಇಲ್ಲ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ವಾದಿಗೆ ದಾವಾ ಸ್ವತ್ತಿನಲ್ಲಿ ಮತ್ತು ದಾವೆಯಲ್ಲಿ ಕೇಳಿದ ರೀತಿಯ ಪರಿಹಾರವನ್ನು ತಪ್ಪಿಸಲು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.